ಪಿ.ಡಬ್ಲು–೩
ದಿ: ೪.೧೧.೨೦೨೩ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ, ಮುಂದುವರೆದ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀ ಹೆಚ್.ಎಸ್.ಆರ್. ವಕೀಲರಿಂದ,

೧೯೮೫ ರಲ್ಲಿ ಇರುವ ಚಕ್ಕುಬಂದಿಯನ್ನೇ ದಾವೆಯಲ್ಲಿ ಹಾಕಿದ್ದೇನೆ. ಪೂರ್ವಕ್ಕೆ ಮೊದಲು ತೊಗಟರ ಸೀತಾರಾಮಯ್ಯ ಇದ್ದು, ಈಗ ನಂಜುಂಡಪ್ಪ ಎಂದು, ಮತ್ತು ಪಶ್ಚಿಮಕ್ಕೆ ತೊಗಟರ ಪಾಪಣ್ಣನ ತೋಟ ಈಗ ಕೆಂಪಣ್ಣ ಇರುವ ಕುರಿತು ದಾಖಲೆಗಳನ್ನು ಹಾಜರುಪಡಿಸಿಲ್ಲ. ಪೂರ್ವಕ್ಕೆ ಮೊದಲು ತೊಗಟರ ಸೀತಾರಾಮಯ್ಯ ಪಶ್ಚಿಮಕ್ಕೆ ತೊಗಟರ ಪಾಪಣ್ಣನ ತೋಟ ಇದೆ ಎಂದು ತೋರಿಸಲು ಕ್ರಯ ಪತ್ರ ಹಾಜರುಪಡಿಸಿದ್ದೇನೆ. ಸದರಿ ಕ್ರಯ ಪತ್ರ ನಮ್ಮ ತಂದೆಯ ಮಾವನವರು ಪಡೆದ ಕ್ರಯ ಪತ್ರ ಆಗಿರುತ್ತದೆ. ರಾಮಣ್ಣ ಇವರು ಪಡೆದಿರುವ ಕ್ರಯ ಪತ್ರದ ಪ್ರಕಾರ ಪೂರ್ವಕ್ಕೆ ತೊಗಟರ ಸೀತಾರಾಮಯ್ಯ ಪಶ್ಚಿಮಕ್ಕೆ ತೊಗಟರ ಪಾಪಣ್ಣನ ತೋಟ , ಉತ್ತರಕ್ಕೆ ಕೆಂಚಮುನಿಯಪ್ಪನ ತೋಟ, ದಕ್ಷಿಣಕ್ಕೆ ಆವಳಪ್ಪನ ತೋಟ ಎಂದು ನಮೂದಿದೆ.

ಉತ್ತರಕ್ಕೆ ತೋರಿಸಿರುವ ಕೆಂಚಮುನಿಯಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ ಕೂಡ ಗೊತ್ತಿಲ್ಲ. ಸದರಿ ಜಮೀನು ಸರಕಲು ಜಮೀನು. ಉತ್ತರಕ್ಕೆ ಇರುವ ಜಮೀನು ಸರಕಲೂರು ಗ್ರಾಮಕ್ಕೆ ಸೇರಿದ್ದು ಎಂದರೆ ಸರಿ. ರಾಮಣ್ಣ ಇವರ ಹೆಂಡ್ತಿ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನಮ್ಮ ಚಿಕ್ಕಪ್ಪ ದೊಡ್ಡಪ್ಪನ ಹತ್ತಿರ ಸದರಿ ವಿಷಯ ತಿಳಿದುಕೊಂಡಿಲ್ಲ. ರಾಮಣ್ಣನ ಹೆಂಡ್ತಿ ರಾಮಣ್ಣನಕ್ಕಿಂತ ಮೊದಲೇ ತೀರಿಕೊಂಡಿದ್ದರು. ಅವರ ಹೆಸರು ಮುನಿಯಮ್ಮ. ರಾಮಣ್ಣನ ಹೆಂಡ್ತಿ ಮುನಿಯಮ್ಮ ಅಂತಹ ಇದ್ದರು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ರಾಮಣ್ಣ ನವರು ನಮ್ಮ ತಂದೆಯ ಜೊತೆಗೆ ೧೯೯೦ರವರೆಗೆ ಇದ್ದರು ಎಂದು ತೋರಿಸಲು ರೇಷನ್ ಕಾರ್ಡ ಮತ್ತು ಚುನಾವಣೆ ಪತ್ರಗಳು ನಮ್ಮ ಬಳಿ ಇಲ್ಲ. ರಾಮಣ್ಣನವರು ನಾರಾಯಣಪ್ಪರವರ ಜೊತೆ ನಾನು ಚಿಕ್ಕವನಿದ್ದಾಗಿನಿಂದಲು ಇದ್ದರು. ರಾಮಣ್ಣ ಮತ್ತು ನಾರಾಯಣಪ್ಪ ಒಟ್ಟಿಗೆ ಇರುವ ಕುರಿತು ಯಾವುದೇ ದಾಖಲೆ ಇಲ್ಲ.

೨೦೧೦ ರವರೆಗೆ ವಿಲ್ ಆಧಾರದ ಮೇರೆಗೆ ಯಾವುದಾದರು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ತಮ್ಮ ತಂದೆ ಅವಿದ್ಯಾವಂತರು ಎನ್ನುತ್ತಾರೆ. ಸದರಿ ವಿಲ್ ಜೊತೆಗೆ ಕ್ರಯ ಪತ್ರಗಳು ಕೂಡ ದೊರೆತ್ತಿದ್ದವು. ವಿಲ್ ಅನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಿಲ್ ನಲ್ಲಿ ಮೊದಲನೇ ಸಾಕ್ಷಿ ಕೃಷ್ಣಪ್ಪ, ೨ನೇ ಸಾಕ್ಷಿ ಲಕ್ಷ್ಮಯ್ಯ ಅಂತಾ ಇರುತ್ತಾರೆ. ಲಕ್ಷ್ಮಯ್ಯ ಇವರನ್ನು ಸಾಕ್ಷಿಯನ್ನಾಗಿ ಮಾಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅವರು ಊರಲ್ಲಿ ತಮಗೆ ವಿರುದ್ದವಾಗಿ ಇದ್ದಾರೆ ಎನ್ನುತ್ತಾರೆ. ಸದರಿ ಸ್ಟಾಂಪ್ ಬರೆದವರನ್ನು ವಿಚಾರಣೆ ಮಾಡಿಸಲು ಆಗುವುದಿಲ್ಲ. ವಿಲ್ ಅನ್ನು ಸೃಷ್ಟಿ ಮಾಡಿದ್ದರಿಂದ ಲಕ್ಷ್ಮಯ್ಯ ಮತ್ತು ಸ್ಟಾಂಪ್ ರೈಟರ್ ಅನ್ನು ವಿಚಾರಣೆ ಮಾಡಿಸಲು ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮಣ್ಣನವರು ೧೯೮೫ ರಲ್ಲಿ ಬದುಕಿರಲಿಲ್ಲ ನಾವು ವಿಲ್ ಅನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ರಾಮಣ್ಣ ಇವರು ೧೯೮೫ ರಲ್ಲಿ ಬದುಕಿದ್ದರು ಎಂದು ತೋರಿಸಲು ದಾಖಲೆ ಹಾಜರು ಮಾಡಲು ಆಗುತ್ತಾ ಎಂದರೆ ಸಾಕ್ಷಿಯು ನಿಪಿ.೪ ಮರಣ ಪ್ರಮಾಣದಂತೆ ೧೯೯೦ ರಲ್ಲಿ ತೀರಿ ಕೊಂಡಿದ್ದಾರೆ ಎನ್ನುತ್ತಾರೆ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಮರಣ ಪ್ರಮಾಣ ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ೧೯೮೫ ರಲ್ಲಿ ರಾಮಣ್ಣನವರು ಬದುಕಿದ್ದರು ಎಂದು ತೋರಿಸಲು ನಮ್ಮ ಮನೆಯವರನ್ನು ಹೊರತುಪಡಿಸಿ ಬೇರೆ ಸಾಕ್ಷಿ ಮಾಡಿಸಲು ಆಗುವುದಿಲ್ಲ.

ಪ್ರತಿವಾದಿ ನಂಜಪ್ಪ ಇವರು ನಮ್ಮೂರಿನವರು ಎಂದರೆ ಸರಿ. ಅವರ ತಂದೆಯ ಹೆಸರು ಕೆಂಚಮುನಿಯಪ್ಪ @ ಅಪ್ಪಯಣ್ಣ ಎಂದು ಇರುತ್ತದೆ. ಈಗ ನನಗೆ ತೋರಿಸುತ್ತಿರುವ ಸಿದ್ದನಹಳ್ಳಿ ಗ್ರಾಮದ ಸರ್ವೆ ನಂ.೨/೨ ,೧೧೫/೧,೧೧೬/೨,೧೩೨ ಇದು ನಂಜಪ್ಪ ಬಿನ್ ಕೆಂಚಮುನಿಯಪ್ಪ ಇವರ ಹೆಸರಿಗೆ ದಾಖಲಿದೆ ಎಂದರೆ ಸರಿ. ಸದರಿ ದಾಖಲೆಗಳನ್ನು ನಿ.ಡಿ.೧ ರಿಂದ ೪ ಎಂದು ತಕಾರಾರಿಗೆ ಒಳಪಟ್ಟು ನಿಶಾನೆಗೊಳಿಸಲಾಯಿತು. ಮತ್ತು ಸರ್ವೆ ನಂ.೧೪೧ ಇದು ರಾಮಣ್ಣ ಬಿನ್ ಕೆಂಚಮುನಿಯಪ್ಪ ಇವರ ಹೆಸರಿಗೆ ಇದೆ ಎಂದರೆ ಸರಿ, ಅದನ್ನು ನಿ.ಡಿ.೫ ಎಂದು ಗುರುತಿಸಲಾಯಿತು. ಸರ್ವೆ ನಂ.೧೦೩/೧ , ೧೦೪/೧ ಎಸ್.ಪಿ.ನಾಗರಾಜು ಬಿನ್ ಎಂ.ಬೈರಪ್ಪ ಇವರ ಹೆಸರಿಗೆ ಆಸ್ತಿ ನಮೂದಿದೆ ಎಂದರೆ ಸರಿ. ಸದರಿ ದಾಖಲೆಗಳನ್ನು ನಿಪಿ.೬ ಮತ್ತು ೭ ಎಂದು ಗುರುತಿಸಲಾಯಿತು.

ನಮ್ಮ ಗ್ರಾಮ ಜೋಡಿ ಗ್ರಾಮ ಎಂದರೆ ಸರಿ. ಸದರಿ ಗ್ರಾಮದಲ್ಲಿ ಸ್ಪೆಷಲ್ ಡೆಪ್ಯೂಟಿ ಕಮೀಷನರ್ ಫಾರ್ ಇನಾಮ್ ಲ್ಯಾಂಡ್ ಅವರಿಂದ ಯಾವುದೇ ಆದೇಶ ಆಗಿರುವುದಿಲ್ಲ. ಈಗ ನನಗೆ ತೋರಿಸುತ್ತಿರುವ ದಾಖಲೆಯಂತೆ ರಾಮಣ್ಣ ಬಿನ್ ಕೆಂಚಮುನಿಯಪ್ಪ ಇವರಿಗೆ ಆಸ್ತಿಗಳು ಸರ್ವೆ ನಂ.೨/೨ , ೧೨, ೧೩/೧, ೧೦೩/೧, ೧೦೪/೧, ೧೧೫/೧, ೧೧೬/೨, ೧೩೧/೩, ೧೩೨, ೧೩೪,೧೬೩/೧,೧೩/೨,೧೪೧,೨೫ ಮಂಜೂರಾಗಿದೆ ಎಂದರೆ ಸಾಕ್ಷಿಯು ಅದನ್ನು ಸೃಷ್ಟಿಸಿಕೊಂಡಿದ್ದಾರೆ ಎನ್ನುತ್ತಾರೆ. ಸರ್ವೆ ನಂ.೧೪೧ ಅನ್ನು ಹೊರತುಪಡಿಸಿ ಮೇಲೆ ಹೇಳಿದ ಎಲ್ಲಾ ಆಸ್ತಿಗಳಿಗೆ ಪ್ರತಿವಾದಿಯರ ಹೆಸರಿಗೆ ಖಾತಾ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ೧೯೪೪ ರಲ್ಲಿ ಕ್ರಯಕ್ಕೆ ಪಡೆದ ನಂತರ ರಾಮಣ್ಣ ಇವರು ಮಂಜೂರಿಗಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿ ಮತ್ತು ರಾಮಣ್ಣನಿಗೆ ಮಂಜೂರಾದ ಇತರೆ ಆಸ್ತಿಗಳು ಇವತ್ತಿಗೂ ಪ್ರತಿವಾದಿಯರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ರಾಮಣ್ಣನವರು ತೀರಿಕೊಂಡ ನಂತರ ದಾವಾ ಆಸ್ತಿಯು ಅವರ ಮಗ ಕೆಂಚಮುನಿಯಪ್ಪ ಇವರ ಹೆಸರಿಗೆ ಖಾತಾ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ರಾಮಣ್ಣ ನವರು ೭.೦೨.೧೯೬೫ ರಲ್ಲಿ ಮರಣ ಹೊಂದಿದ್ದಾರೆ ಎಂದರೆ ಸರಿಯಲ್ಲ. ೧೯೬೫ ರಲ್ಲಿ ರಾಮಣ್ಣನವರು ಮರಣ ಹೊಂದಿದ ನಂತರ ಅವರ ಆಸ್ತಿಯು ಅವರ ಮಕ್ಕಳ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸಂಬಂಧಪಟ್ಟ ಇಲಾಖೆಯಿಂದ ರಾಮಣ್ಣನವರ ಕುಟುಂಬದ ವಂಶವೃಕ್ಷ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ತಾನು ಈಗಾಗಲೇ ನಿಪಿ.೧೫ ರಂತೆ ದಾಖಲೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ೨೦೧೦ ನೇ ಸಾಲಿನಲ್ಲಿ ಗಣಕೀಕೃತ ದಾಖಲೆ ನೀಡುತ್ತಿದ್ದರು ಎಂದರೆ ಸರಿಯಲ್ಲ.

೧೯೯೦ ರಲ್ಲಿ ರಾಮಣ್ಣನವರು ಬದುಕಿರಲಿಲ್ಲ ಆಸ್ತಿ ಕಬಳಿಸುವ ಉದ್ದೇಶದಿಂದ ನಿಪಿ.೫ ಅನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ರಾಮಣ್ಣ ಇವರಿಗೆ ಕೆಂಚಮ್ಮ ಎಂಬ ಹೆಂಡ್ತಿ ಇದ್ದರು ಎಂದರೆ ಸರಿಯಲ್ಲ. ರಾಮಣ್ಣನಿಗೆ ಕೆಂಚಮುನಿಯಪ್ಪ @ ಅಪ್ಪಯಣ್ಣ ಎಂಬ ಮಗ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ರಾಮಣ್ಣನಿಗೆ ಮಕ್ಕಳು ಇರಲಿಲ್ಲ ಎನ್ನುತ್ತಾರೆ.

( ಈ ಹಂತದಲ್ಲಿ ಶ್ರೀ ಹೆಚ್.ಎಸ್.ಆರ್.ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**